**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 51/2017**

ದಿನಾಂಕಃ 01.10.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 6 ಪ್ರಾಸಾ - 6

| | | |
|---|---|---|
| ಹೆಸರು | ಃ | ನಾಗರಾಜು |
| ತಂದೆಯ/ಗಂಡನ ಹೆಸರು | ಃ | ಚಲುವರಂಗಯ್ಯ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಮಾದೇಗೌಡನದೊಡ್ಡಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿವರು 1 ನೇ ಆರೋಪಿ ಸಮೀರ್ ಎಂ.ಡಿ. ಅಲಿಯಾಸ್ ಸುಲ್ತಾನ್‌ನನ್ನು ರಾಮನಗರ ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ.

2. ಪ್ರೇಮಾ ಮತ್ತು ಗಂಗಾಧರ್ ರವರ ಮನೆಯಲ್ಲಿ ಕಳ್ಳತನವಾದ ಸಂಬಂಧವಾಗಿ ಸುಮಾರು 7 ತಿಂಗಳ ಹಿಂದೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ರಮೇಶ್ ರವರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ಸದರಿ ಪೊಲೀಸರು ನನಗೆ 1 ನೇ ಆರೋಪಿ ಸಮೀರ್ ಎಂ.ಡಿ. ಅಲಿಯಾಸ್ ಸುಲ್ತಾನ್‌ನನ್ನು ತೋರಿಸಿಕೊಟ್ಟಿದ್ದಾರೆ.

3. ಪ್ರೇಮಾ ರವರ ಮನೆಯಲ್ಲಿ ಕಳ್ಳತನಮಾಡಿದ 7 ಜನ ಆರೋಪಿಗಳ ಪೈಕಿ 1 ನೇ ಆರೋಪಿ ಸಮೀರ್ ಎಂ.ಡಿ. ಅಲಿಯಾಸ್

ಸುಲ್ತಾನನು ಒಬ್ಬನು, ಆತನ ವಶದಿಂದ ಕಳ್ಳತನವಾದ ನೆಕ್‌ಲೆಸ್, ರೂ.5,000/- ಪಡೆದುಕೊಂಡು ನಮಗೆ ತೋರಿಸಿ ಪಂಚನಾಮೆ ಮಾಡಿದರು. ಆಗ ಅಕ್ಕಸಾಲಿಗನನ್ನು ಕರೆಯಿಸಿ ನೆಕ್‌ಲೆಸ್‌ನ್ನು ತೂಕ ಮಾಡಿದಾಗ ಅದರ ತೂಕ 25 ಗ್ರಾಂ ಇತ್ತು. ಅವರು ಅದು ಚಿನ್ನದ್ದೇ ಎಂದು ಖಾತ್ರಿ ಪಡಿಸಿದರು.

4. ನಾನು ನೋಡಿದಾಗ ರೂ.5,000/- ದಲ್ಲಿ 2000 ಮುಖಬೆಲೆಯ ಎರಡು ನೋಟುಗಳು ಮತ್ತು 100 ರ ಮುಖಬೆಲೆಯ 10 ನೋಟುಗಳು ಇದ್ದವು.

5. ಅಲ್ಲಿ ಒಂದು ಮೊಬೈಲ್ ಇತ್ತು. ಅದನ್ನು ಕಳ್ಳತನ ಮಾಡಿದ ವ್ಯಕ್ತಿ ಪೊಲೀಸರಿಗೆ ಕೊಟ್ಟಿದ್ದಾನೆ. ಆ ಮೊಬೈಲ್‌ನ್ನು ನೋಡಿದರೆ ಗುರುತಿಸುತ್ತೇನೆ. ಠಾಣೆಯಲ್ಲಿ ಒಂದು ಸಿಲ್ವರ್ ಕಲರ್‌ನ ಕ್ವಾಲಿಸ್ ವಾಹನ ಇತ್ತು.

6. ಅಲ್ಲಿ ಬರೆದ ಪಂಚನಾಮೆಗೆ ನಾನು ರುಜು ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪಂಚನಾಮೆ ಈಗ ನೋಡಿದ ನಿಶಾನೆ ಪಿ 7. ಸಾಕ್ಷಿಯ ರುಜುವನ್ನು ನಿಶಾನೆ ಪಿ 7(ಬಿ) ಎಂದು ನಿಶಾನೆ ಮಾಡಲಾಯಿತು.

7. ಪೊಲೀಸರು ವಶಪಡಿಸಿಕೊಂಡ ಕ್ವಾಲೀಸ್ ವಾಹನದ ಫೋಟೋವನ್ನು ಈಗ ನೋಡಿದೆ. ಸದರಿ ಫೋಟೋವನ್ನು ಈಗಾಗಲೇ ನಿಶಾನೆ ಪಿ 5 ಮತ್ತು 6 ಎಂದು ನಿಶಾನೆ ಮಾಡಲಾಗಿದೆ.

8. ಅದೇ ರೀತಿ ಪೊಲೀಸರು ವಶಪಡಿಸಿಕೊಂಡ ನೆಕ್‌ಲೆಸ್‌ನ ಫೋಟೋವನ್ನು ಈಗ ನೋಡಿದೆ. ಸದರಿ ಫೋಟೋವನ್ನು ನಿಶಾನೆ ಪಿ 8 ಎಂದು ನಿಶಾನೆ ಮಾಡಲಾಯಿತು. (ಸದರಿ ನೆಕ್‌ಲೆಸ್‌ನ್ನು ಈಗಾಗಲೇ ಮುದ್ದೆಮಾಲು 6 ಎಂದು ನಿಶಾನೆ ಮಾಡಲಾಗಿದೆ.)

9. ಪೊಲೀಸರು ವಶಪಡಿಸಿಕೊಂಡ ಮೊಬೈಲ್‌ನ್ನು ಈಗ ನೋಡಿದೆ. ಸದರಿ ಮೊಬೈಲ್‌ನ್ನು ಮುದ್ದೆಮಾಲು 17 ಎಂದು ನಿಶಾನೆ ಮಾಡಲಾಗಿದೆ.

10. ಸದರಿ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡಿದ ಫೋಟೋ ಸದರಿ ಹಣವನ್ನು ವಶಕ್ಕೆ ಪಡೆದಿರುವ ಫೋಟೋವಾಗಿದೆ. ಸದರಿ ಫೋಟೋವನ್ನು ನಿಶಾನೆ ಪಿ 9 ಎಂದು ನಿಶಾನೆ ಮಾಡಲಾಯಿತು.

**<u>ಪಾಟೀ ಸವಾಲು:</u> ಶ್ರೀ.ಹೆಚ್.ಎಸ್.ಆರ್. ವಕೀಲರಿಂದ – 1 ನೇ ಆರೋಪಿ ಪರವಾಗಿಃ-**

11. ನನ್ನ ಮನೆಯಿಂದ ಪ್ರೇಮಾರವರ ಮನೆಗೆ 1 ಕಿ.ಮೀ. ದೂರ. ಪ್ರೇಮಾ ನನ್ನ ದೂರದ ಸಂಬಂಧಿ ಎನ್ನುವುದು ಸರಿ. ಪ್ರೇಮಾಳ ಮನೆಯಲ್ಲಿ ಕಳ್ಳತನವಾದ ದಿವಸವೇ ಆ ವಿಚಾರ ನನಗೆ ಗೊತ್ತಾಗಿದೆ.

ಕಳ್ಳತನವಾದ ಸಂಬಂಧವಾಗಿ ನಾನು ಮಹಜರ್‌ಗೆ ಮನೆಯಲ್ಲಿ ರುಜು ಮಾಡಿದ್ದೇನೆ. ಒಡವೆಗಳನ್ನು ಕೊಡುವಾಗ ಠಾಣೆಯಲ್ಲಿ ರುಜು ಮಾಡಿದ್ದೇನೆ. ಅಂದರೆ ಪ್ರೇಮಾ ಒಡವೆಗಳನ್ನು ಬಿಡಿಸಿಕೊಳ್ಳುವಾಗ ಠಾಣೆಯಲ್ಲಿ ರುಜು ಮಾಡಿದ್ದೇನೆ. ಅದೇ ರೀತಿ ಪ್ರೇಮಾ ಹಣವನ್ನು ರಿಲೀಸ್ ಮಾಡಿಸಿಕೊಳ್ಳುವಾಗಲೂ ನಾನು ಠಾಣೆಯಲ್ಲಿ ರುಜು ಮಾಡಿದ್ದೇನೆ.

12. ಠಾಣೆಯಲ್ಲಿ ಹೇಳಿಕೆಯನ್ನು ಕೊಟ್ಟಿಲ್ಲ. ಪೊಲೀಸರು ಬರವಣಿಗೆ ಮಾಡಿಕೊಂಡು ನನ್ನ ರುಜು ಪಡೆದುಕೊಂಡಿದ್ದಾರೆ.

13. ಮಹಜರ್‌ಗೆ ಪೊಲೀಸರು ನನ್ನನ್ನು ಕರೆದಿಲ್ಲ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರ್‌ನ್ನು ಮಾಡಿಲ್ಲ ಎನ್ನುವುದು ಸರಿಯಲ್ಲ. ಪ್ರೇಮಾಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಉಳಿದ ಆರೋಪಿಗಳ ಪರವಾಗಿಃ ಇರುವುದಿಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.